**ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿ.ಸಿ. ನಂ. 3837/2021**

| | | | |
|---|---|---|---|
| ಹೆಸರು | : | ವೀರಾರೇಡ್ಡಿ | ದೋ.ಸಾ. 6 |
| ತಂದೆಯ ಹೆಸರು | : | ನಾಗರೇಡ್ಡಿ | ಪ್ರಾ.ಸಾ. 4 |
| ವಯಸ್ಸು | : | 53 ವರ್ಷ | ದಿನಾಂಕಃ 04-10-2023 |
| ಉದ್ಯೋಗ | : | ಒಕ್ಕಲುತನ | |
| ವಾಸಸ್ಥಳ | : | ಪರದಾರ ಮೋತಕಪಳ್ಳಿ | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ನ್ಯಾಯಾಲಯದ ಮುಂದೆ ಇರುವ 1 ರಿಂದ 3 ಮತ್ತು 5 ನೇ ಆರೋಪಿತರು ನನಗೆ ಗೊತ್ತು. ಈ ದಿನ ಗೈರು ಹಾಜರಿರುವ 4 ನೇ ಆರೋಪಿ ಸಹ ನನಗೆ ಗೊತ್ತು. ಪ್ರಾಸಾ-1, ಚಾಸಾ-4, ಹಾಗೂ ಪ್ರಾಸಾ-3 ರವರು ನನಗೆ ಗೊತ್ತು.

ನನಗೆ ಈ ಪ್ರಕರಣದ ಬಗ್ಗೆ ಯಾವದೇ ಮಾಹಿತಿ ಇಲ್ಲ. ನಾನು ಜಗಳ ನಡೆದಾಗ ಇರಲಿಲ್ಲ ಹಾಗೂ ಜಗಳದ ಬಗ್ಗೆ ನನಗೆ ಗೊತಿಲ್ಲ. ಪೊಲೀಸರಿಗೆ ನಾನು ಯಾವದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ತನಿಖಾಧಿಕಾರಿಯವರ ಮುಂದೆ ಕೊಟ್ಟಿರುವ ಹೇಳಿಕೆಗೆ ಈ ಸಾಕ್ಷಿ ಸಂಪೂರ್ಣ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ದಿನಾಂಕಃ 08-06-2021 ರಂದು ಬೆಳಿಗ್ಗೆ 12.30 ಗಂಟೆ ಸುಮಾರಿಗೆ ನಾನು ಹಣವನ್ನು 1 ಮತ್ತು 5 ನೇ ಆರೋಪಿತರಿಗೆ ಕರೆದು ನೀಡಿರುತ್ತೇನೆ ಎಂದರೆ ಸರಿ. ಆಗ ತನ್ನ ಪಾಲಿನ ಹಣವನ್ನು ತೆಗೆದುಕೊಂಡು ಬರುವಂತೆ ಪ್ರಾಸಾ-1 ರವರು ತನ್ನ ಮಗನಾದ ಚಾಸಾ-7 ರವರಿಗೆ ಕಳುಹಿಸಿದಾಗ ಇಬ್ಬರು ಅವನ ಕೈಯಲ್ಲಿ ಹಣ ಕೊಟ್ಟು ಮತ್ತೆ ಕಸೀದುಕೊಂಡು ಕಳುಹಿಸಿರುತ್ತಾರೆ ಎಂದರೆ ನನಗೆ ಗೊತಿಲ್ಲ. ಆಗ ಆರೋಪಿತರು ಪ್ರಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಹೊಡೆಬಡೆ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ನಂತರ ನನಗೆ ಪ್ರಾಸಾ-1 ರವರು ತಿಳಿಸಿದ್ದೇನೆಂದರೆ ಮಧ್ಯಾಹ್ನ 3.30 ಗಂಟೆ ಸುಮಾರಿಗೆ ನಾನು ಚಾಸಾ-5 ರವರ ಮನೆ ಹತ್ತಿರ ಇರುವಾಗ 2 ಮತ್ತು 5 ನೇ ಆರೋಪಿತರು ಬಂದು ಹೊಡೆಬಡೆ ಮಾಡಿ ಬಡಿಗೆಯಿಂದ ಹೊಡೆದು ಗುಪ್ತ ಗಾಯಪಡಿಸಿರುತ್ತಾರೆ. ನಂತರ ಚಾಸಾ-4 ರವರ ಸೀರೆ ಮತ್ತು ತಲೆ ಕೂದಲು ಹಿಡಿದು ಎಳೆದಾಡಿ ಅವಮಾನ ಮಾಡಿರುತ್ತಾರೆ ಎಂದು ತಿಳಿಸಿರುತ್ತಾರೆಎಂದರೆ ಸರಿಯಲ್ಲ. ಈ ರೀತಿ ನಾನು ದಿನಾಂಕಃ 07-07-2021 ರಂದು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳೆದ ಹೇಳಿಕೆಯನ್ನು ನಿಪಿ-7 ಎಂದು ಗುರುತಿಸಲಾಯಿತು. ನನಗೆ ಎಲ್ಲ ಗೊತಿದ್ದರೂ ಆರೋಪಿತರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಎಸ್.ಎನ್.ಬಿ. ವಕೀಲರಿಂದಃ ಇಲ್ಲ</u>**

**<u>ಮರುವಿಚಾರಣೆ ಇಲ್ಲ.</u>**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ**